ಹಾನಿಯಿಂದಾಗಿ ನಿರ್ಗತಿಕರಾಗಿರುವ ಸ್ಥಿತಿ ಬಂದಿದೆ. ಈ ಒಗ್ಗೆ ಕೂಡಲೇ ಪರಿಶೀಲನೆ ನಡೆಸಿ, ನೊಂದವರಿಗೆ ಪರಿಹಾರ ಒದಗಿಸಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೇ, ದಿನಾಂಕ ೨೩-೩-೧೯೮೮ ರಂದು ಸುಮಾರು ೨-೪೫ ಘಂಟೆಗೆ ಕುಂದಾಪುರ ತಾಲ್ಲೂಕಿನ ಗಂಗೊಳ್ಳಿ ಸಮೀಪದ ಬಂಡೂರು ಹಳ್ಳಿಯಲ್ಲಿ ಸುಣ್ಣ ತಯಾರಿಸುತ್ತಿರುವ ಗುಡಿಸಲಿಗೆ ಬೆಂಕಿ ಹತ್ತಿ ಸುತ್ತಮುತ್ತಲಿನ ಗುಡಿಸಲಿಗೂ ಹರಡಿತು. ಈ ಬೆಂಕಿ ಅನಾಹುತದಿಂದ ೧೨ ಗುಡಿಸಲುಗಳು ಸುಟ್ಟು ಹೋಗಿ ಅದರೊಳಗೆ ಒಂದು ಸಣ್ಣ ಹೋಟೆಲ್ ಎರಡು ಸಣ್ಣ ಡೀಸಿಲ್ ಇಂಜಿನ್ ಬೋಟುಗಳು ಮತ್ತು ಗುಡಿಸಲಿನಲ್ಲಿಟ್ಟಿದ್ದ ಮೀನು ಹಿಡಿಯುವ ನೈಲಾನಿನ ಬಲೆಗಳು ನಾಶವಾಗಿರುತ್ತದೆ. ಯಾರಿಗೂ ಇದರಿಂದ ಪ್ರಾಣಾಹಾನಿಯಾಗಿಲ್ಲ. ಕುಂದಾಪುರದ ಪೋಲೀಸರು ಸ್ಥಳೀಯ ಮೀನುಗಾರರ ಜೊತೆಗೆ ಬೆಂಕಿಯನ್ನು ಆರಿಸಲು ಪ್ರಯತ್ನಪಟ್ಟರು ಆದರೆ ಸಫಲವಾಗಲಿಲ್ಲ ಈ ಬೆಂಕಿ ಅನಾಹುತದಲ್ಲಿ ಸುಮಾರು ಎರಡು ಲಕ್ಷದಷ್ಟು ರೂ.ಗಳ ಹಾನಿಯಾಗಿರುತ್ತದೆ. ನೊಂದವರಿಗೆ ಪರಿಹಾರ ಧನ ಒದಗಿಸುವ ಬಗ್ಗೆ ಕಂದಾಯ ಇಲಾಖೆಯವರು ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

೧೩) ಬಳ್ಳಾರಿ ಜಿಲ್ಲೆಯ ತುಂಗಭದ್ರ ಬಲದಂಡೆಯ ಚಾನಲ್ ಕೆಳಗೆ ಬರುವ ಬೆಳೆಗಳಿಗೆ ನೀರು ಬಿಡುವ ಬಗ್ಗೆ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೇ, ಈಗ ಪ್ರಸ್ತಾಪ ಮಾಡಬೇಕಿದಿರುವ ವಿಷಯ ಆಂಗ್ಲ ಭಾಷೆಯಲ್ಲಿರುವುದರಿಂದ ತಾವೇ ಓದಿ ಬಿಡಿ ಸ್ವಾಮಿ,

ಅಧ್ಯಕ್ಷರು.—ಬಳ್ಳಾರಿ ಜಿಲ್ಲೆಯ ತುಂಗಭದ್ರ ಬಲದಂಡೆ ಚಾನಲ್‌ನಲ್ಲಿರುವ ಬೆಳೆಗಳಿಗೆ ೧೮ ದಿನಗಳ ಮಟ್ಟಿಗೆ ನೀರನ್ನು ಬಿಡುವ ಬಗ್ಗೆ.

ಶ್ರೀ ಎ ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ೧೦ ದಿನಗಳ ಮಟ್ಟಿಗೆ ನೀರು ಬಿಡುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ,

ಅಧ್ಯಕ್ಷರು,—ಉತ್ತರ ತರಿಸಿಕೊಡುತ್ತಾರೆ. ನೀರನ್ನು ಬಿಡುವ ವ್ಯವಸ್ಥೆ ಸಹ ಮಾಡಲಾಗುತ್ತದೆ. ತವಂಗೆ ಪರಿಹಾರವೂ ಸಿಗುತ್ತದೆ.

ಶ್ರೀ ಕೆ. ವಸಂತ ಬಿ, ಸಾಲಿಯಾನ್(ಆಬ್ಸೆಂಟ್) ಧರ್ಮಪ್ಪನವರೇ, ನಾನು ಕರೆದಾಗ ನೀವು ಆಬ್ಸೆಂಟ್ ಆಗಿರುತ್ತೀರಿ. ಬೇರೆಯವರು ಮಾತನಾಡುವಾಗ ಎದ್ದು ನಿಲ್ಲುತ್ತೀರಿ.

೧೪) ಲೋಕೋಪಯೋಗಿ ಇಲಾಖೆಯಲ್ಲಿ ಇರುವ ಆಕೃತಿ ರಚನಾಕಾರರಿಗೆ ಮುಂಬಡ್ತಿಯ ಅವಕಾಶಗಳಿಲ್ಲದಿರುವುದು

ಶ್ರೀ ಬಿ. ಧರ್ಮಪ್ಪ —ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರಕಾರದ ಲೋಕೋಪಯೋಗಿ ಇಲಾಖೆಯಲ್ಲಿ ಇರುವ ಆಕೃತಿ ರಚನಕಾರರು (ಡ್ರಾಫ್ಟ್ಸ್‌ಮೆನ್) ಇವರುಗಳಿಗೆ ಮುಂಬಡ್ತಿಯ ಅವಕಾಶಗಳು ಇದ್ದಂತೆ ತಿಳಿದು ಬರುವುದಿಲ್ಲ. ಏಕೆಂದರೆ ೨೫ ರಿಂದ ಸುಮಾರು ೩೦ ವರ್ಷಗಳವರೆವಿಗೂ ಸೇವೆ ಸಲ್ಲಿಸಿದವರಿಗೂ ಯಾವ ಬಡ್ತಿಯೂ ಸಿಕ್ಕಿಲ್ಲವೆಂದು ತಿಳಿದು ಬಂದಿರುತ್ತದೆ. ಆದರೆ ಎಲ್ಲಾ ಇಲಾಖೆಗಳಲ್ಲಿಯೂ ಸಾಮಾನ್ಯವಾಗಿ ಒಂದಲ್ಲ ಒಂದು ರೀತಿ ಬಡ್ತಿ ಸಿಗುತ್ತದೆ. ಆದರೆ ಲೋಕೋಪಯೋಗಿ ಇಲಾಖೆಯಲ್ಲಿರುವ ಆಕೃತಿ ರಚನಕಾರರಿಗೆ (ಡ್ರಾಫ್ಟ್ಸ್‌ಮೆನ್) ಯಾವ ಬಡ್ತಿಯೂ ಇರುವುದಿಲ್ಲ. ಹಾಗೂ ಆಕೃತಿ ರಚನಕಾರರ ಜಾಗದಲ್ಲಿ (ಡ್ರಾಫ್ಟ್ಸ್‌ಮೆನ್) ಬೇರೆ ಹುದ್ದೆಯವರನ್ನು ನೇಮಿಸಿ ಆದರಲ್ಲಿರುವ ಅವಕಾಶವನ್ನು ಸಹ ಕಡಿಮೆ ಮಾಡುತ್ತಾ ಬಂದಂತೆ ಕಾಣುತ್ತದೆ. ಹೀಗೆ ಬಡ್ತಿಯೂ ಇಲ್ಲದೇ ಅವಕಾಶವೂ ಇಲ್ಲವೇ ಅನೇಕ ಡ್ರಾಫ್ಟ್ಸ್‌ಮೆನ್‌ಗಳು ಕೆಲಸಕ್ಕೆ ಸೇರಿದಾಗಿನಿಂದ ಕೆಲಸದಿಂದ ನಿವೃತ್ತಿಯಾಗುವವರೆವಿಗೂ ಒಂದೇ ಹೆಸರಿನ ಹುದ್ದೆಯಲ್ಲಿ ಸೇವೆ ಸಲ್ಲಿಸುವ ಪ್ರಸಂಗವಿದೆ, ಆದುದರಿಂದ ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರು ಇದರ ಬಗ್ಗೆ ಗಮನ ಹರಿಸಿ ಇವರಿಗೆ ಬೇರೆ ಹುದ್ದೆಗಳಂತೆ ಬಡ್ತಿ ಮತ್ತೆರೆ ಮಾರ್ಪಾಟುಗಳನ್ನು ಮಾಡಲು ಏನಾದರೂ ಕ್ರಮ ಕೈಗೊಳ್ಳುವಿರಾ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

೧೯೮೮-೮೯ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

† ಶ್ರೀ ಕುಮಾರಗೌಡ ಪಾಟೀಲ್ (ಬಸವನಬಾಗೇವಾಡಿ).—ಮಾನ್ಯ ಅಧ್ಯಕ್ಷರೇ, ೧೯೮೮-೮೯ನೇ ಸಾಲಿನ ಆಯವ್ಯಯ ಪತ್ರದ ಮೇಲೆ ನಾನು ಮಾತನಾಡುತ್ತೇನೆ. ಬಹಳ ವರ್ಷಗಳಿಂದ ನಮ್ಮ ರಾಜ್ಯದಲ್ಲಿ ನೀರಾವರಿಗೆ ಎಷ್ಟು ಆದ್ಯತೆ ಕೊಡಬೇಕಾಗಿತ್ತೋ ಅಷ್ಟು ಆದ್ಯತೆ ಕೊಟ್ಟಿಲ್ಲವೆಂದು ನಾನು ಇಲ್ಲಿ ನಾಲ್ಕನೇ ಸಲ ಹೇಳುತ್ತಿದ್ದೇನೆ. ಆದರೂ ಸಹ ನೀರಾವರಿ ಯೋಜನೆಗಳಿಗೆ ಹೆಚ್ಚು ಹಣ ಖರ್ಚು ಮಾಡದೆ ಇತರೇ ಯೋಜನೆಗಳಿಗೆ ಹೆಚ್ಚು ಹಣ ಖರ್ಚು ಮಾಡುವುದು ನಮ್ಮಲ್ಲಿ ರೂಢಿಯಲ್ಲಿ ಬಂದಿದೆ.

(ಶ್ರೀ ನಾರಾಯಣರಾವ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಮೂರು ವರ್ಷಗಳಲ್ಲಿ ಎರಡು ವರ್ಷಗಳು ಬರಗಾಲ ಬೀಳುತ್ತದೆ. ಬಿಜಾಪುರ ನಗರದಲ್ಲಿ ಕುಡಿಯುವ ನೀರಿಗೂ ತೊಂದರೆ ಬಂದಿದೆ. ಹೆಂಗಸರು ಮತ್ತು ಮಕ್ಕಳು ನಳದ ಮುಂದೆಯೇ ರಾತ್ರಿ ಕಾಲದಲ್ಲಿ ನೀರು ಬರುವವರೆಗೆ ಮಲಗುವುದನ್ನು ನಾವು ನೋಡಬಹುದಾಗಿದೆ. ಇಷ್ಟಾದರೂ ನಮ್ಮ ಸರ್ಕಾರದವರು ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಕೊಯ್ನಾ ನದಿಯಿಂದ ಒಂದು ಟಿ.ಎಂ.ಸಿ. ನೀರನ್ನು ನಾವು ಪಡೆದುಕೊಳ್ಳಲು ಮಹಾರಾಷ್ಟ್ರ ಸರ್ಕಾರದವರಿಗೆ ನಮ್ಮ ಸರ್ಕಾರದವರು ೨ ಕೋಟಿ ರೂಪಾಯಿಗಳನ್ನು ಕೊಟ್ಟರು. ಆದರು ನೀರು ಬಿಟ್ಟರೂ ಸಹ ನಮ್ಮ ಜಿಲ್ಲೆಯವರೆಗೆ ನೀರು ಬರಲೇ ಇಲ್ಲ. ಚಿಕ್ಕ ಪಡಸಲಗಿ ಹತ್ತಿರ ಒಂದು ಬ್ಯಾರೇಜ್‌ನ್ನು ೫೮ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿಸಿದ ಮೇಲೆ ಅಲ್ಲಿ ೩ ಟಿ.ಎಂ.ಸಿ.ಯಷ್ಟು ನೀರು ನಿಲ್ಲುತ್ತಿದೆ. ಇದರಿಂದ ಸುಮಾರು ೨೫ ಸಾವಿರ ಎಕರೆಗಳಷ್ಟು ಪ್ರದೇಶಕ್ಕೆ ನೀರಾವರಿ ಆಗುತ್ತದೆ. ಇದರಿಂದ ಕುಡಿಯುವ ನೀರನ್ನು ಸಹ ಸರಬರಾಜು ಮಾಡಬಹುದಾಗಿದೆ. ಆದ್ದರಿಂದ ಇಂತಹ ಬ್ಯಾರೇಜ್‌ಗಳನ್ನು ಮೇಲಿಂದ ಮೇಲೆ ಕಟ್ಟಿಸುವುದಕ್ಕೆ ಸರ್ಕಾರದವರು ಕ್ರಮ ತೆಗೆದುಕೊಳ್ಳುವುದು ಒಳ್ಳೆಯದು. ೧೯೬೪ರಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಅಪ್ಪರ್ ಕೃಷ್ಣಾ ಯೋಜನೆಗೆ ಅಡಿಗಲ್ಲನ್ನು ಹಾಕಿದರು. ಇಲ್ಲಿಯವರೆಗೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದ್ದರೂ ಸಹ ಆ ಕೆಲಸ ಇನ್ನೂ ಮುಗಿದಿಲ್ಲ. ೧೯೭೭ನೇ ಇಸವಿಯಲ್ಲಿ ಈ ಅಪ್ಪರ್ ಕೃಷ್ಣಾ ಯೋಜನೆಯನ್ನು ಕೈಕೊಳ್ಳಬೇಕೆಂದು ನಾವು ಈ ಸಭೆಯಲ್ಲಿ ಒತ್ತಾಯ ಮಾಡಿ ಹೇಳಿದ್ದೆವು. ಆದರ ಪ್ರಕಾರ ಕೆಲಸ ಪ್ರಾರಂಭವಾದರೂ ಸಹ ಇನ್ನೂ ಮುಗಿದಿಲ್ಲ. ಈ ಯೋಜನೆಯಿಂದ ನಾವು ಎಕರೆಗಳಷ್ಟು ಭೂಮಿಯನ್ನು ಕಳೆದುಕೊಳ್ಳುತ್ತೇವೆ. ಆದ್ದರಿಂದ ಇದಕ್ಕೆ ಬದಲು ನಮ್ಮಲ್ಲಿ ಹರಿಯುವಂತಹ ೪ ನದಿಗಳಿಗೂ ಸಹ ನಾಲ್ಕು ನಾಲ್ಕು ಬ್ಯಾರೇಜ್‌ಗಳನ್ನು ಒಂದೊಂದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿಸಿದರೆ ಲಕ್ಷಾಂತರ ಎಕರೆಗಳಿಷ್ಟು ಭೂಮಿಗೆ ನೀರನ್ನು ಕೊಡಬಹುದು. ಕೇವಲ ೧೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಸಾಕು, ಹೆಚ್ಚಿನ ರೈತರಿಗೆ ಸಹಾಯ ಮಾಡಬಹುದು. ನಮ್ಮ ಭಾಗಕ್ಕೆ ಒಂದು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಮಾಡಿ ಎಂದು ಕೇಳಿಕೊಂಡಾಗ ಅದನ್ನು ಮುಖ್ಯಮಂತ್ರಿಗಳು ಒಪ್ಪಿಕೊಂಡು ಮಾಡಿದರು. ಆದರೆ ಕೆಲಸ ಮಾತ್ರ ಏನೂ ಆಗಿಲ್ಲ. ಈಗ ಅಲ್ಲಿ ೮-೧೦ ಜೀಪ್‌ಗಳು ಇವೆ, ಅಧಿಕಾರಿಗಳು ಇದ್ದಾರೆ, ಕೆಲಸ ಮಾತ್ರ ಆಗುತ್ತಿಲ್ಲ. ಇನ್ನು ಮುಂದೆಯಾದರೂ ಈ ಲಿಫ್ಟ್ ಇರಿಗೇಷನ್ ಕೆಲಸಗಳು ತೀವ್ರಗತಿಯಿಂದ ಆಗುವಂತಹ ವ್ಯವಸ್ಥೆ ಮಾಡಬೇಕಾಗಿ. ಲಿಫ್ಟ್ ಇರಿಗೇಷನ್ ಕೆಲಸಗಳು ಮತ್ತು ಸಣ್ಣ ನೀರಾವರಿ ಯೋಜನೆಗಳ ಕೆಲಸವನ್ನು ಎಲ್ಲೆಲ್ಲಿ ತೆಗೆದುಕೊಳ್ಳಬಹುದೆಂಬುದರ ಬಗ್ಗೆ ಸರ್ವೆ ಮಾಡಿಸಿ ಸಾಧ್ಯವಾದ ಕಡೆಗಳಲ್ಲಿ ತೆಗೆದುಕೊಂಡು ನೂರಾರು ಎಕರೆಗಳಿಗೆ ನೀರಾವರಿ ಆಗುವಂತಹ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿರುವಂತಹ ಮಮದಾಪೂರ ಗ್ರಾಮದಲ್ಲಿರುವ ಪುರಾತನ ಕೆರೆಯ ಬಗ್ಗೆ ಒಂದು ಪ್ರಶ್ನೆ ಕೇಳಿದ್ದೇನೆ. ಆ ಕೆರೆಯಲ್ಲಿ ಸೇರಿಕೊಂಡಿರುವ ಹೂಳನ್ನು ತೆಗೆಸಿದರೆ ಸುಮಾರು ೩ ಸಾವಿರ ಹೆಕ್ಟಾರ್ ಪ್ರದೇಶಕ್ಕೆ ನೀರಾವರಿಯಾಗುತ್ತದೆ. ೨೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿರುವ ಟ್ರಾಕ್ಟರ್‌ಗಳ